# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಶರಣಬಸಪ್ಪ.ಬಿ.ಪಾಟೀಲ್, ಅಧ್ಯಕ್ಷರು, ಸುಂದಾಳ ಗ್ರಾಮ ಪಂಚಾಯಿತಿ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 48(4) ಮತ್ತು 43-ಎ ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅಸ.ಪ.ಸಂಖ್ಯೆ: Compt/Uplok/GLB-1686/2013/ARE-5 ದಿನಾಂಕ:11-11-2016.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:21-01-2017ರ ಕಾರಣ ಕೇಳುವ ನೋಟೀಸು.
3. ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರ ದಿನಾಂಕ:22-02-2017 ಮತ್ತು 07-06-2017ರ ಲಿಖಿತ ಹೇಳಿಕೆಗಳು.
4. ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 07-06-2017.
5. ಮಾನ್ಯ ಒಂಬಡ್ಸ್‌ಮನ್ ಎಂ.ಜಿ.ಎನ್.ಆರ್.ಜಿ.ಎ. ಜಿ.ಪಂ. ಬೀದರ್ ರವರ ಪತ್ರ ಸಂಖ್ಯೆ:NREGA/ ಒಂಬಡ್ಸ್‌ಮನ್/2013-14 ದಿನಾಂಕ:23-04-2017.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ರವರ ಪತ್ರ ಸಂಖ್ಯೆ:ಜಿಪಂಬೀ/ಗ್ರಾಪಂ/ಸಿಆರ-10/2017-18 ದಿನಾಂಕ:02-05-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ:11-11-2016ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರ ಅರೆ ಸರ್ಕಾರಿ ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತ-1ರವರು ದಿನಾಂಕ:09-11-2016 ರಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ದಿಲೀಪ್ ಬಿನ್ ಯಾದವರಾವ್, ಜಕ್ನಾಲ್, ಸುಂಧಾಳ ಪೋಸ್ಟ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ರವರು ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರ ವಿರುದ್ಧ ಸಲ್ಲಿಸಿದ ದೂರಿನ ಅನುಸಾರವಾಗಿ ಲೋಕಾಯುಕ್ತ ಸಂಸ್ಥೆಯು ನಡೆಸಿದ ತನಿಖೆಯಲ್ಲಿ ಈ ಕೆಳಕಂಡ ಆಪಾದನೆಗಳು ಸಾಬೀತಾಗಿರುತ್ತವೆಂದು ತಿಳಿಸಿರುತ್ತಾರೆ.

*"ಜಕನಾಳ ಗ್ರಾಮದ ಸರ್ವೆ ನಂ: 3/ಸಿ ಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ್ ಖಾತ್ರಿ ಯೋಜನೆಯಡಿಯಲ್ಲಿ ತೆರೆದ ಬಾವಿ ಕಾಮಗಾರಿ ಕೈಗೊಳ್ಳುವಾಗ ಕಾಯ್ದೆಯ ಮಾರ್ಗಸೂಚಿಗಳು ಪಾಲಿಸದೇ ಹಣದ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿದ್ದಾರೆ".*

2ನೇ ಎದುರುದಾರರು ಅಧ್ಯಕ್ಷರಾಗಿದ್ದು, ಹಣ ದುರುಪಯೋಗಕ್ಕೆ ಜವಾಬ್ದಾರರಾಗಿರುತ್ತಾರೆ. ಅದರಂತೆ 2ನೇ ಎದುರುದಾರರಾದ ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರ ವಿರುದ್ಧ ಪಂಚಾಯತ್ ರಾಜ್ ಕಾಯಿದೆಯನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಉಪಲೋಕಾಯುಕ್ತ-1ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರಿಗೆ 21-01-2017 ರಂದು ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ಲಿಖಿತ ಹೇಳಿಕೆ ನೀಡಿ, "ಶ್ರೀ ದಿಲೀಪ್ ಯಾದವರಾವ್ ಜಕನಾಳ ಗ್ರಾಮದ ಸರ್ವೆ ನಂ: 3/ಸಿ ಯಲ್ಲಿ ಎಂ.ಜಿ.ಎನ್.ಆರ್.ಜಿ.ಎ. ಯೋಜನೆಯಡಿಯಲ್ಲಿ ತೆರೆದ ಬಾವಿ ಕಾಮಗಾರಿ ಕೈಗೊಳ್ಳುವಾಗ ಕಾಯ್ದೆಯ ಮಾರ್ಗಸೂಚಿಗಳು ಪಾಲಿಸದೇ ಹಣದ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿದ್ದಾರೆಂದು ದೂರು ಸಲ್ಲಿಸಿರುತ್ತಾರೆ. ಆದರೆ ಸದರಿ ಕಾಮಗಾರಿಯನ್ನು ಕಾಯ್ದೆಯ ಮಾರ್ಗಸೂಚಿಯನ್ವಯವೇ ಕೈಗೊಳ್ಳಲಾಗಿರುತ್ತದೆ. ಹಾಗೂ ಯಾವುದೇ ರೀತಿಯ ಹಣ ದುರುಪಯೋಗವಾಗಲಿ, ಕರ್ತವ್ಯ ಲೋಪವಾಗಲಿ ಎಸಗಿರುವುದಿಲ್ಲ.

ನಿಯಮಾನುಸಾರ ಸದರಿ ಕಾಮಗಾರಿಯನ್ನು ಕೂಲಿ ಕಾರ್ಮಿಕರು ಕೈಗೊಂಡಿದ್ದು, ಕೂಲಿ ಕೆಲಸ ಮಾಡಿದ ಕೂಲಿ ಕಾರ್ಮಿಕರ ಖಾತೆಗೆ ಒಟ್ಟು ರೂ.70,875/- ಹಣ ಜಮಾ ಮಾಡಲಾಗಿರುತ್ತದೆ. ಹಾಗೂ ತೆರೆದಬಾವಿ ಕಾಮಗಾರಿ ಕೈಗೊಳ್ಳುವಾಗ ಕಲ್ಲುಗಳನ್ನು ಒಡೆಯಲು ಬ್ಲಾಸ್ಟಿಂಗ್ ಮಾಡಲಾಗಿರುತ್ತದೆ. ಹೀಗಾಗಿ ಬ್ಲಾಸ್ಟಿಂಗ್ ಕ್ರೇನ್, ಟ್ರಾನ್ಸ್‌ಪೋರ್ಟ್ ಹಣವನ್ನು ಏಜನ್ಸಿದಾರರಿಗೆ ರೂ.53,500/- ಗಳ ಚೆಕ್ ನೀಡಲಾಗಿರುತ್ತದೆ.

ಸದರಿ ದೂರುದಾರರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಿಗೆ **ದಿನಾಂಕ: 15-06-2013** ರಂದು ದೂರು ಸಲ್ಲಿಸಿರುವುದರಿಂದ ಮಾನ್ಯ ಸಚಿವರ ಟಿಪ್ಪಣಿಯಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೀದರ್ ರವರು ಒಂಬಡ್ಸ್‌ಮನ್ ರವರಿಗೆ ಸದರಿ ಕಾಮಗಾರಿಯನ್ನು ಪರಿಶೀಲಿಸಿ ವಿಚಾರಣೆಗೆ ನೇಮಿಸಿರುತ್ತಾರೆ.

ಆದ್ದರಿಂದ ಮಾನ್ಯ ಒಂಬಡ್ಸ್‌ಮನ್ ಜಿ.ಪಂ. ಬೀದರ್ ರವರು **ದಿನಾಂಕ: 28-12-2013** ರಂದು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರ ಸಮ್ಮುಖದಲ್ಲಿ ಕಾಮಗಾರಿ ಪರಿಶೀಲಿಸಿದ್ದು, **ದಿನಾಂಕ: 24-04-2014** ರಂದು ಪಿರಿಯಾದುದಾರರು ಮಾಡಿರುವ ಆರೋಪಗಳು ನಿರಾಧಾರ ಮತ್ತು ಸುಳ್ಳು ಇರುವುದು ತನಿಖೆಯಿಂದ ಕಂಡು ಬಂದಿರುತ್ತದೆ. ಹೀಗಾಗಿ ದೂರನ್ನು ಮುಕ್ತಾಯಗೊಳಿಸಿ ಆದೇಶಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೀದರ್‌ರವರಿಗೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಾನ್ಯ ನಿರ್ದೇಶಕರು, ಗುಣ ನಿಯಂತ್ರಣ ದೂರುಗಳು & ಜಾಗೃತ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಮಾಹಿತಿಗಾಗಿ ಸಲ್ಲಿಸಿರುತ್ತಾರೆ" ಎಂದು ಸದರಿಯವರು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 07.06.2017 ರಂದು ಜರುಗಿದ ವಿಚಾರಣೆಯಲ್ಲಿ ಆಪಾದಿತ ಅಧ್ಯಕ್ಷರು, ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಔರಾದ ಹಾಜರಿದ್ದರು. "ಶ್ರೀ ದಿಲೀಪ್ ಬಿನ್ ಯಾದವರಾವ್, ಜಕ್ನಾಲ್, ಮಾಡಿರುವ ಆರೋಪಗಳು ನಿರಾದಾರ ಮತ್ತು ಸುಳ್ಳು ಇರುವುದು ತನಿಖೆಯಿಂದ ಕಂಡು ಬಂದಿರುತ್ತದೆ. ಆದ್ದರಿಂದ ಫಿರಿಯಾದುದಾರರಿಗೆ ಭವಿಷ್ಯತ್ತಿನಲ್ಲಿ ಇಂತಹ ಸುಳ್ಳು ದೂರುಗಳನ್ನು ನೀಡಿ ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ಪಡಿಸದಂತೆ ಎಚ್ಚರಿಕೆ ನೀಡಲಾಗಿದೆ" ಎಂದು ಮೇಲೆ ಓದಲಾದ ಉಲ್ಲೇಖ(5)ರ ಮಾನ್ಯ ಒಂಬಡ್ಸ್‌ಮನ್ ಎಂ.ಜಿ.ಎನ್.ಆರ್.ಜಿ.ಎ. ಜಿ.ಪಂ. ಬೀದರ್ ರವರ ಪತ್ರ ಸಂಖ್ಯೆ:NREGA/ ಒಂಬಡ್ಸ್‌ಮನ್/2013-14 ದಿನಾಂಕ:23-04-2017 ರನ್ನು ದೃಢೀಕರಿಸಿ ಮೇಲೆ ಓದಲಾದ (6)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ರವರು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ, ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರು ನೀಡಿರುವ ಲಿಖಿತ ಹೇಳಿಕೆ, ಮಾನ್ಯ ಒಂಬಡ್ಸ್‌ಮನ್ ಎಂ.ಜಿ.ಎನ್.ಆರ್.ಜಿ.ಎ. ಜಿ.ಪಂ. ಬೀದರ್ ಹಾಗೂ ದಿನಾಂಕ 07.06.2017 ರಂದು ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಇವರ ನ್ಯಾಯಾಲಯದಲ್ಲಿ ನಡೆದ ವಿಚಾರಣಾ ಸಂದರ್ಭದಲ್ಲಿನ ಸಾಕ್ಷ್ಯಾಧಾರ ಹೇಳಿಕೆಗಳನ್ನು ಸರ್ಕಾರವು ಪರಿಶೀಲಿಸಿದ್ದು, ದೂರುದಾರರು ಮಾಡಿರುವ ಆರೋಪಗಳು ನಿರಾದಾರ ಮತ್ತು ಸುಳ್ಳು ಇರುವುದು ಕಂಡುಬಂದಿದ್ದು, ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತು 48(4) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಡಲು ನಿರ್ಧರಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 795 ಗ್ರಾಪಂಕಾ 2016 ಬೆಂಗಳೂರು, ದಿನಾಂಕ:17.10.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಒಂಬಡ್ಸ್‌ಮನ್, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ಜಿಲ್ಲಾ ಪಂಚಾಯಿತಿ, ಬೀದರ್ ರವರು ಜಕನಾಳ ಗ್ರಾಮದ ಸರ್ವೆ ನಂ: 3/ಸಿ ಯಲ್ಲಿ ಎಂ.ಜಿ.ಎನ್.ಆರ್.ಜಿ.ಎ. ಯೋಜನೆಯಡಿಯಲ್ಲಿ ತೆರೆದ ಬಾವಿ ಕಾಮಗಾರಿಯಲ್ಲಿ ದುರುಪಯೋಗ ಇರುವುದಿಲ್ಲವೆಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತು 48(4) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಸರ್ಕಾರವು ಆದೇಶಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
17/10/17
(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಜಿಲ್ಲೆ.
2. ಅಪರನಿಬಂಧಕರು ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ.
4. ಶ್ರೀ ಶರಣಬಸಪ್ಪ ಬಿ ಪಾಟೀಲ್, ಅಧ್ಯಕ್ಷರು, ಸುಂಧಾಳ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ, ಸುಂದಾಳ ಗ್ರಾಮ ಪಂಚಾಯಿತಿ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ.
6. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.